◆ **ಪಿಎಲ್‌ಒ (ಪ್ಯಾಲೆಸ್ಟೀನ್ ವಿಮೋಚನಾ ಹೋರಾಟ) ಇವತ್ತು ಏನು ಮಾಡ್ತಾ ಇದೆ? ಇಂದಿನ ಅದರ ಆದ್ಯತೆಗಳೇನು ಅಥವಾ ಸಾಧ್ಯತೆಗಳೇನು? ಇದರ ಕುರಿತು ಈ ಹೋರಾಟದ ಮೂರನೇ ತಲೆಮಾರಿನ ಲೇಖಕಿಯಾಗಿ ನಿಮ್ಮ ಪ್ರಾಮಾಣಿಕ ಅನಿಸಿಕೆಗಳನ್ನು ತಿಳಿಸಿ. ಏನಾದರೂ ಪರಿಹಾರದ ಹೆದ್ದಾರಿ ಕಾಣುತ್ತಿದೆಯೇ?**

ಗಾಜಾದಲ್ಲಿ ಇಂದು ನಾವೆಲ್ಲಾ ಎದುರಿಸುತ್ತಿರುವ ದೊಡ್ಡ ಸವಾಲು ಪ್ಯಾಲೆಸ್ಟೀನ್ ವಿಭಜನೆ ಅಥವಾ ಛಿದ್ರೀಕರಣ. ದಿನಗಳೆದಂತೆ ನಿರಂತರವಾಗಿ ಹೆಚ್ಚುತ್ತಿರುವ ಈ ವಿಭಜನೆಯ ಹುನ್ನಾರವನ್ನು ನಾವು ನಿರಾಕರಿಸಬೇಕಾಗಿದೆ. ಯುದ್ಧವನ್ನು ನಿಲ್ಲಿಸಲು, ಜನರನ್ನು ತಮ್ಮ ಮನೆಗಳಿಗೆ ಹಿಂದಿರುಗಿಸಲು ಮತ್ತು ನಮ್ಮ ಮಕ್ಕಳಿಗೆ ಭಯವಿಲ್ಲದ ಭವಿಷ್ಯವನ್ನು ಕಟ್ಟಿಕೊಡಲು ಈ ವಿಭಜನೆಗೆ ಅಂತ್ಯ ಹಾಡುವುದು ಅತ್ಯಗತ್ಯ. ನಾವೆಲ್ಲರೂ ಒಗ್ಗಟ್ಟಾಗಿ ಅಖಂಡ ಪ್ಯಾಲೆಸ್ಟೀನ್ ದೇಶವನ್ನು ನಿರ್ಮಿಸುವುದೊಂದೇ ಪರಿಹಾರವೆಂದು ನಾನು ಭಾವಿಸುತ್ತೇನೆ. ನಾನು ಮೂರನೇ ತಲೆಮಾರಿನ ಪ್ಯಾಲೆಸ್ಟೀನ್ ಬರಹಗಾರ್ತಿ– ನನ್ನ ತಂದೆ– ತಾಯಿ ಬದುಕಿಗಾಗಿ ಹೋರಾಡಿದರು, ನನ್ನ ಅಜ್ಜ– ಅಜ್ಜಿ ತಮ್ಮ ಮೂಲನೆಲವನ್ನು ಕಳೆದು ಕೊಂಡರು, ಈಗ ನನ್ನ ಮಕ್ಕಳು ಯುದ್ಧದ ನೆರಳಿನಲ್ಲಿ ಬೆಳೆಯುತ್ತಿದ್ದಾರೆ. ಈ ನೋವಿನ ವಲಯವನ್ನು ಮುರಿಯುವ ಏಕಮಾತ್ರ ದಾರಿ ಏಕತೆ.

ಪ್ಯಾಲೇಸ್ಟೀನಿಯನ್ ಲಿಬರೇಷನ್ ಆರ್ಗನೈಸೇಷನ್ ಒಮ್ಮೆ ನಮ್ಮ ಹೋರಾಟದ ಹೃದಯವಾಗಿತ್ತು. ಆದರೆ ಇಂದು ಅದರೊಳಗಿನ ಭಿನ್ನಾಭಿಪ್ರಾಯಗಳು ಜನರಿಗೆ ನಿರಾಶೆ ತಂದಿವೆ. ಮಹಾನ್ ನಾಯಕ ಯಾಸರ್ ಅರಾಫತ್ ಹೋದ ಮೇಲೆ ಅದು ತನ್ನತನ ಕಳೆದು ಕೊಂಡಿತು ಎನ್ನಬಹುದು.

◆ **ಪ್ರಸ್ತುತ ಗಾಜಾ ಪಟ್ಟಿಯ ಪರಿಸ್ಥಿತಿ ಗಮನಿಸಿದರೆ ನಮ್ಮಂಥವರಿಗೆ 'ಅರಬ್ ಬ್ರದರ್‌ಹುಡ್ ಕಾನ್ಸೆಪ್ಟ್' ಸಂಪೂರ್ಣವಾಗಿ ವಿಫಲವಾಗಿದೆ ಅನ್ಸುತ್ತೆ. ಒಂದು ರಾಜಕೀಯ ಅಭಿಪ್ರಾಯ ರೂಪಿಸಲು ಬೇಕಾದ ಧನಾತ್ಮಕ ಜನಾಭಿಪ್ರಾಯ ಇದ್ದಾಗಲೂ ಇದು ಯಾಕೆ ಹೀಗಾಯ್ತು?**

ಮೇಲುನೋಟಕ್ಕೆ ಕಾಣುವಂತೆ, ಅರಬ್ ಜಗತ್ತಿನ ಒಗ್ಗಟ್ಟು ಇರುವುದು (ಹಾಗೊಮ್ಮೆ ಇರುವುದೇ ನಿಜವಾದರೆ!) ಅದರ ಆಳವಾದ ಇಸ್ಲಾಮಿಕ್ ಆಚರಣೆಗಳಲ್ಲೇ ಹೊರತು, ಭಾಷಾಬಾಂಧವ್ಯ ಅಥವಾ ಜನಾಂಗೀಯ ಆಸಕ್ತಿಗಳಲ್ಲಿ ಅಲ್ಲ ಅನ್ಸುತ್ತೆ. ಮತ್ತೆ ಈ ಪ್ರಶ್ನೆಗೆ ಉತ್ತರಿಸುವುದು ನೀವು ಕೇಳಿದಷ್ಟು ಸಲೀಸು ಅಲ್ಲ. ಪ್ರತಿ ದೇಶದ ರಾಜಕೀಯ ಹಾಗೂ ಭದ್ರತಾ ಹಿತಾಸಕ್ತಿಗಳು ವಿಭಿನ್ನವಾಗಿದ್ದವು. ಆ ಕಾರಣದಿಂದ ಅರಬ್ ಮೀಡಿಯಾ ಬಾಹ್ಯ ಒತ್ತಡ ಮತ್ತು ಹಸ್ತಕ್ಷೇಪಗಳಿಂದ ಪ್ರಭಾವಿತವಾಗಿ, ಏಕಪಕ್ಷೀಯವಾಗಿ ಮಾತನಾಡಿತು.ಜನರಲ್ಲಿ ಸಹಾನುಭೂತಿ ಇದ್ದರೂ, ಸರ್ಕಾರದ ನೀತಿಗಳ ವಿರುದ್ಧ ಜನರ ಇಚ್ಛಾಶಕ್ತಿ ಗಟ್ಟಿಯಾಗಿ ನಿಲ್ಲದೇ ಇರುವುದರಿಂದ, ಆ ಸಹಾನುಭೂತಿ ನಾಯಕರ ನಿರ್ಧಾರಗಳಲ್ಲಿ ಪ್ರತಿಫಲಿಸಲಿಲ್ಲ.

ಗಾಜಾದ ಸದ್ಯದ ಪರಿಸ್ಥಿತಿಯನ್ನು ನೋಡಿದಾಗ 'ಅರಬ್ ಸಹೋದರತ್ವ' ಎಂಬ ಕಲ್ಪನೆ ಸಂಪೂರ್ಣ ವಿಫಲವಾಗಿದೆ ಎಂಬ ಭಾವನೆ ಜನರಿಗೆ ಉಂಟಾಗುವುದು ಸಹಜ. ಜನರ ಹೃದಯದಲ್ಲಿ ಇನ್ನೂ ಸಹಾನುಭೂತಿ ಇದೆ. ಆದರೆ ರಾಜಕೀಯದ ಮೇಜಿನ ಮೇಲೆ ಅದು ಕಾಣೆಯಾಗುತ್ತದೆ. ಸರ್ಕಾರಗಳ ಹಿತಾಸಕ್ತಿಗಳು, ಗಡಿಗಳ ಲೆಕ್ಕಾಚಾರಗಳು ಮತ್ತು ಅಧಿಕಾರದ ಆಟಗಳು ನಮ್ಮ ನೋವನ್ನು ಮರೆ ಮಾಡುತ್ತವೆ.

ನಾನು ಅನೇಕ ಬಾರಿ ನೋಡಿದ್ದೇನೆ. ಸಾಮಾನ್ಯ ಅರಬ್ ಜನರು ತಮ್ಮ ಮನೆಗಳಲ್ಲಿ, ಮಸೀದಿಗಳಲ್ಲಿ, ಬೀದಿಗಳಲ್ಲಿ ಗಾಜಾದ ಮಕ್ಕಳಿಗಾಗಿ ಶೋಕಿಸುತ್ತಾರೆ, ನಮಗಾಗಿ ಪ್ರಾರ್ಥನೆ ಮಾಡುತ್ತಾರೆ. ಆದರೆ ಆ ಕಣ್ಣೀರು ಜಾಗತಿಕ ಪ್ರಭಾವಿಗಳ ಮನಸ್ಸನ್ನು ತೋಯಿಸುವುದಿಲ್ಲ. ಅವರು ನಮಗಾಗಿ ಮರುಗುವುದಿಲ್ಲ. ನಮ್ಮ ನಿಜವಾದ ಭರವಸೆ ಗಡಿಯನ್ನು ಮೀರಿದ ಮಾನವೀಯತೆಯಲ್ಲಿದೆ ಎಂದು ನಾನು ಭಾವಿಸುತ್ತೇನೆ. ಅದು ಅರಬ್ಬರಾಗಿರಲಿ, ಯಹೂದಿಗಳಾಗಿರಲಿ, ಪಾಶ್ಚಿಮಾತ್ಯರಾಗಿರಲಿ ಅಥವಾ ಯಾರೇ ಆಗಿರಲಿ -ನಮ್ಮ ನೋವನ್ನು ತಮ್ಮ ಕಣ್ಣುಗಳಿಂದ ಮತ್ತು ನಮ್ಮ ಕನಸುಗಳನ್ನು ತಮ್ಮ